**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಾಗಮಂಗಲ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 450/2015**

**ಪಿ.ಡಬ್ಲ್ಯೂ-1**

**ಸಾಕ್ಷಿಗೆ ದಿನಾಂಕ 17-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಶ್ರೀ.ಡಿ.ಆರ್.ಎಂ ಆರೋಪಿಯ ಪರ ವಕೀಲರಿಂದ</u>**

ಆರೋಪಿಯು ನನಗೆ ಸುಮಾರು 16-17 ವರ್ಷಗಳಿಂದ ಪರಿಚಯಸ್ಥರು. ಸಾಕ್ಷಿಯು ಮುಂದುವರೆದು ನನ್ನ ಮಾವನಾದ ಶಿವಣ್ಣ ಎಂಬುವವರೊಂದಿಗೆ ಆರೋಪಿಯು ಬರುತ್ತಿದ್ದರು, ಆದ್ದರಿಂದ ಆರೋಪಿಯ ಪರಿಚಯವಾಗಿರುತ್ತದೆ. ಆರೋಪಿಯ ಸ್ವಂತ ಊರು ಮೈಸೂರು. ದೂರನ್ನು ಆರೋಪಿಯ ಮೈಸೂರಿನ ವಿಳಾಸವನ್ನೇ ದಾಖಲಿಸಿ ಸಲ್ಲಿಸಿದ್ದೇನೆ. ನನ್ನ ಮಾವನಾದ ಶಿವಣ್ಣ ಸುಮಾರು 2 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ.

2. ನನ್ನ ಮಾವನ ಶಿವಣ್ಣನಿಗೆ ಒಬ್ಬ ರವಿ ಎಂಬ ಮಗನಿದ್ದಾನೆ ಎಂದರೆ ಸರಿಯಲ್ಲ. ನನ್ನ ಮಾವನಿಗೆ ಕೇವಲ ಎರಡು ಜನ ಹೆಣ್ಣು ಮಕ್ಕಳು ಎಂದು ನುಡಿಯುವರು. ನನ್ನ ಅಳಿಯನ ಹೆಸರು ರವಿಕುಮಾರ್.

3. ಆರೋಪಿಯು ದಿನಾಂಕ 18.10.2013 ರಲ್ಲಿ ಅಂದರೆ ಚೆಕ್ಕನ್ನು ಕೊಡುವ 1 ತಿಂಗಳ ಹಿಂದೆ ನನ್ನಿಂದ ಹಣ ಪಡೆದುಕೊಂಡಿದ್ದರು. ಆರೋಪಿಗೆ ಯಾವುದೋ ತೊಂದರೆ ಮತ್ತು ಕಷ್ಟದ ಸಲುವಾಗಿ ವಾಪಸ್ಸು ಕೊಡುತ್ತೇನೆ ಎಂದು ಹಣವನ್ನು ಪಡೆದುಕೊಂಡರು. ಯಾವ ಸಮಸ್ಯೆ ಎಂದು ನಾನು ಕೇಳಲಿಲ್ಲ. ಸಾಕ್ಷಿಯ ಮುಂದುವರೆದು ಹಳೆಯ ಪರಿಚಯವಾಗಿದ್ದರಿಂದ ಮತ್ತು ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರಿಂದ ಹಣವನ್ನು ಕೊಟ್ಟಿದ್ದೆ ಎಂದು ಹೇಳುವರು.

4. ನಾನು ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದು ಹೇಳುವ ದಿನ ನನ್ನ ಬಳಿ ಹಣ ಇತ್ತು ಎಂದು ತೋರಿಸಲು ಮಾನ್ಯ ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು

ತೆಂಗಿನಕಾಯಿಯನ್ನು ಮಾರಿದ ಹಣವಿತ್ತು ಎಂದು ಉತ್ತರಿಸುವರು. ಅಂದಾಜು 20-30 ಸಾವಿರ ತೆಂಗಿನ ಕಾಯಿಗಳನ್ನು ಮಾರಾಟ ಮಾಡಿದ್ದೆ. 20-30 ಸಾವಿರ ತೆಂಗಿನ ಕಾಯಿಗಳು ನಮ್ಮ ತೋಟದಿಂದ ಬರುತ್ತವೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

5. ನಾನು ಆರೋಪಿಗೆ ಹಣವನ್ನು ಕೊಡುವ ದಿನದಿಂದ ಒಂದು ತಿಂಗಳ ಹಿಂದೆ ಸಾಲವಾಗಿ ಹಣ ಕೊಡುವಂತೆ ಕೇಳಿದ್ದರು. ಆರೋಪಿಯು ಹಣ ಕೇಳಿದ ದಿನವೇ ನಾನು ಹಣವನ್ನು ಕೊಟ್ಟಿದ್ದೇನೆ. ಆರೋಪಿಗೆ ಹಣವನ್ನು ನಮ್ಮ ಊರಿನಲ್ಲಿ ಕೊಟ್ಟಿದ್ದೇನೆ. ಆರೋಪಿಯೊಂದಿಗೆ ಆತನ ಗೆಳೆಯನೊಬ್ಬ ಬಂದಿದ್ದರು. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಹೇಳಿ ಬರೆಸಿದ್ದೇನೆ.

6. ಆರೋಪಿಯು ಚೆಕ್ಕನ್ನು 2013 ನೇ ಸೆಪ್ಟೆಂಬರ್ 18 ರಲ್ಲಿ ಕೊಟ್ಟಿದ್ದಾರೆ. ಸಾಕ್ಷಿಯು ಮುಂದುವರೆದು ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುವರು. ಆರೋಪಿಯೊಂದಿಗೆ ಬಂದಿದ್ದ ವ್ಯಕ್ತಿ ಯಾರೆಂದು ನನಗೆ ಗೊತ್ತಿಲ್ಲ. ಆರೋಪಿಯೊಂದಿಗೆ ಇನ್ನೊಬ್ಬ ವ್ಯಕ್ತಿ ಬಂದಿದ್ದರು ಎಂದು ನನ್ನ ದೂರಿನಲ್ಲಿ ಬರೆಸಿಲ್ಲ.

7. ಚೆಕ್ಕನ್ನು ಹೊರತು ಪಡಿಸಿ ಆರೊಪಿಗೆ ಸಾಲದ ಹಣ ಕೊಟ್ಟ ಬಗ್ಗೆ ಯಾವುದೇ ಪತ್ರ ವ್ಯವಹಾರ ಮಾಡಿಕೊಂಡಿಲ್ಲ. ನನ್ನ ಮನೆಯಲ್ಲಿ ಸಿಸಿ ಟಿವಿ ಯನ್ನು ಹಾಕಿಸಿದ್ದೇನೆ ಎಂದರೆ ಸರಿಯಲ್ಲ.

8. ಆರೋಪಿಗೆ ಎರಡು ಜನ ಹೆಣ್ಣು ಮಕ್ಕಳು ಮತ್ತು ಹೆಂಡತಿ ಇದ್ದಾರೆ. ಸದರಿಯವರ ಹೆಸರುಗಳು ನನಗೆ ಗೊತ್ತಿಲ್ಲ. ಈ ಪ್ರಕರಣದ ವ್ಯವಹಾರಕ್ಕಿಂತ ಮೊದಲು ಆರೋಪಿಯೊಂದಿಗೆ ಬೇರೆ ಯಾವುದೇ ಹಣಕಾಸಿನ ವ್ಯವಹಾರವನ್ನು ಮಾಡಿರಲಿಲ್ಲ. ಆರೋಪಿಯು ನನ್ನ ಮಾವನ ಸ್ನೇಹಿತ ಅಥವಾ ಪರಿಚಯಸ್ಥನಾದ ಕಾರಣ ಹಣವನ್ನು ಕೊಟಿದ್ದೇನೆ.

9. ಚೆಕ್ಕನ್ನು ಆರೋಪಿಯು ಕೊಟ್ಟ ಒಂದು ತಿಂಗಳ ನಂತರ ಹಾಜರುಪಡಿಸಿದ್ದೇನೆ. ದಿನಾಂಕ 18.10.2013 ರಂದು ಚೆಕ್ಕನ್ನು ಹಾಜರುಪಡಿಸಿದ್ದೇನೆ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹವನ್ನು ಕೊಟ್ಟಿದ್ದಾರೆ. ನಾನು ಕಳುಹಿಸಿದ ನೋಟೀಸು ಆರೋಪಿಗೆ ತಲುಪಿದೆಯೋ ಇಲ್ಲವೂ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ವಿಳಾಸವನ್ನು ಬದಲಾಯಿಸಿಕೊಂಡು ಹೋಗಿದ್ದಾರೆ ಎಂದು ತಿಳಿಯಿತು ಎಂದು ನುಡಿಯುವರು.

10. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸಾಕ್ಷಿಯು ನಮ್ಮ ಮನೆಗೆ ಬರುತ್ತಿದ್ದರು. ನಾನು ಆರೋಪಿಯ ಮನೆಗೆ ಹೋಗಿಲ್ಲ ಎಂದು ನುಡಿಯುವರು. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನ ಕಡೆಯಿಂದಲೇ ಆರೋಪಿಯ ಪರಿಚಯವಾಗಿತ್ತು ಎಂದರೆ ಸರಿ.

11. ಆರೋಪಿಗೆ ನಾನು 3 ಲಕ್ಷ ಹಣ ಕೊಡುವಷ್ಟು ನನಗೆ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನ ಹತ್ತಿರ ಇದ್ದ ಆರೋಪಿಯ ಚೆಕ್ಕನ್ನು ಪಡೆದುಕೊಂಡು ಆರೊಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

12. ನನ್ನ ಮಾವ ಮತ್ತು ಆರೋಪಿಯ ನಡುವೆ 2 ಲಕ್ಷ ಹಣದ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಸದರಿ ಹಣದ ವ್ಯವಹಾರದ ಭದ್ರತೆಗಾಗಿ ಆರೋಪಿಯು 4 ಚೆಕ್ಕುಗಳನ್ನು ನನ್ನ ಮಾವನಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಹಣವನ್ನು ಆರೋಪಿಯು ನನ್ನ ಮಾವನಿಗೆ ಸಂಪೂರ್ಣವಾಗಿ ಮರುಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ನನ್ನ ಮಾವ ಆರೋಪಿಯ ವಿರುದ್ಧ ನನ್ನ ಕಡೆಯಿಂದ ಮತ್ತು ಸ್ವತಃ ಅವರೇ ಮೈಸೂರಿನ ನ್ಯಾಯಾಲಯದಲ್ಲಿಯೂ ಕೂಡ ಆರೋಪಿಯ ವಿರುದ್ಧ

ಸುಳ್ಳು ದೂರು ದಾಖಲಿಸಿದ್ದಾರೆ ಎಂದರೆ ಸರಿಯಲಲ.

13. ಅಂಬಲ ಜೀರಹಳ್ಳಿ ಗ್ರಾಮದ ನಿತೀಶ್ ಎಂದರೆ ನನ್ನ ಸ್ನೇಹಿತ. ಸದರಿಯವರು ಕೂಡ ಆರೋಪಿಯ ವಿರುದ್ದ ಚೆಕ್ ಅಮಾನ್ಯ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸದರಿಯವರಿಂದಲೂ ಕೂಡ ಆರೋಪಿಯು ಹಣವನ್ನು ಪಡದುಕೊಂಡು ಮೋಸ ಮಾಡಿದ್ದಾರೆ ಎಂದರೆ ಸರಿ. ನನ್ನ ಅಳಿಮಯ್ಯನು ಕೂಡ ಆರೋಪಿಯ ವಿರುದ್ದ ಮೈಸೂರಿನ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**ನನ್ನ ಸಮಕ್ಷಮ**

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ನಾಗಮಂಗಲ.**

**CC. No.101/2017**

Case called out. Accused absent.

Advocate for accused files application U/Sec.317 of Cr.P.C. Heard and satisfied with urged grounds therein. Hence, application filed U/Sec. 317 of Cr.P.C. is allowed.

CW-6 is present and examined him as PW-6, documents marked at Ex.P2(b). PW-6 turned hostile and learned APP cross examines in full. Advocate for the accused submits no cross-examination.

Reissue w/w to CW 4, 5, 13, 18, 20 and 22.

**Call on 15-02-2025.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ **450/2015**

ಪಿ.ಡಬ್ಲ್ಯೂ-**1**

**Civil Judge and JMFC.,**
**Nagamangala.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ **450/2015**

**ಪಿ.ಡಬ್ಲ್ಯೂ-1**

**CC. No.**

Case called out. Accused Present.

CW-1 is present and examined him as PW-1, documents marked at Ex.P1 to P3. PW-1 turned hostile and learned APP cross examines in full. Advocate for the accused submits no cross-examination.

APP prays issuance of summons to other witnesses. Since material witness of the case turned hostile no purpose would be served by the examining other witnesses. Therefore prayer is rejected.

Since there is no incriminating evidence appears against the accused, statement as required U/sec 313 of Cr.Pc is hereby dispensed.

Heard both side.

For Judgment

**Call on**

**Civil Judge and JMFC.,**
**Nagamangala.**